# ಕರ್ನಾಟಕ ವಿಧಾನ ಪರಿಷತ್

## ಶ್ರೀ ಮಂಜುನಾಥ ಭಂಡಾರಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 59 (ಶೂನ್ಯವೇಳೆ)ರಡಿ ನೀಡಿರುವ ಸೂಚನೆಗೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ

**ಪ್ರಶ್ನೆ:-**

**"ಹೂಳು ತುಂಬಿ ದಿಬ್ಬವಾದ ಪಂಚಗಂಗಾವಳಿ, ಸರಕಾರದ ಗಾಢ ಮೌನ: ಹೂಳೆತ್ತಲು ಆಗ್ರಹ"** ಎಂಬ ಶೀರ್ಷಿಕೆಯಡಿ ದಿನಾಂಕ:06/03/2025ರ ಜನಪ್ರತಿನಿಧಿ ಪತ್ರಿಕೆಯಲ್ಲಿ ವರದಿಯಾಗಿದೆ.

ಅತ್ಯಂತ ಅಪರೂಪದ ಪಂಚಗಂಗಾವಳಿ ಪ್ರದೇಶ ಕಂಡು ಬರುವುದಿದ್ದರೆ ಅದು ಕುಂದಾಪುರದಲ್ಲಿ ಮಾತ್ರ. ಆದರೆ ಇದು ಆಳುವ ವರ್ಗದ ನಿರ್ಲಕ್ಷ್ಯಕ್ಕೆ ಗುರಿಯಾಗಿ ಯಾವುದೇ ಅಭಿವೃದ್ಧಿ ಕಾಣದೆ, ಹೂಳು ತುಂಬಿ ಹೊಳೆಯೇ ಬತ್ತಿ ಬರಡಾದಂತಾಗಿದೆ. ಗಂಗಾವಳಿಯಲ್ಲಿ ಸಾವಿರಾರು ಲೋಡು ಹೂಳು ತುಂಬಿರುವ ಪರಿಣಾಮ ನದಿಯ ನೀರಿನ ಸಂಚಾರದ ವ್ಯತ್ಯಯವಾಗಿ ಜನಜೀವನಕ್ಕೂ ತೊಂದರೆಯಾಗುತ್ತಿದೆ.

ಕುಂದಾಪುರ ಪುರಸಭಾ ವ್ಯಾಪ್ತಿಯ ಉತ್ತರ ದಿಕ್ಕಿನಲ್ಲಿರುವ ಪಂಚಗಂಗಾವಳಿ ನದಿಯನ್ನು ಅವಲಂಭಿತರಾಗಿ ಸುಮಾರು 500ಕ್ಕೂ ಹೆಚ್ಚು ಕುಟುಂಬಗಳು ಸುಮಾರು ವರ್ಷಗಳಿಂದ ತಮ್ಮ ಬದುಕನ್ನು ಕಟ್ಟಿಕೊಂಡು ಬರುತ್ತಿದ್ದಾರೆ. ಈ ಕುಟುಂಬಗಳಿಂದ ಮೀನುಗಾರಿಕೆ, ಚಿಪ್ಪು ಹೆಕ್ಕುವಂತದ್ದು, ಮೀನು ಸಾಕಾಣಿಕೆ, ದೋಣಿ ಚಲಿಸುವಂತದ್ದು, ಪ್ರವಾಸೋದ್ಯಮ ಹೀಗೆ ಹಲವಾರು ಚಟುವಟಿಕೆಗಳು ನಡೆಯುತ್ತಿರುತ್ತದೆ. ಈ ಹಿಂದೆ ಈ ನದಿ ಪಾತ್ರದಲ್ಲಿ ಸಾಂಪ್ರದಾಯಿಕ ಮರಳುಗಾರಿಕೆ ನಡೆಯುತ್ತಿತ್ತು. ಹಾಗಾಗಿ ಇದರ ಪರಿಣಾಮ ಯಾವುದೇ ಹೂಳು ಶೇಖರಣೆಯಾಗುತ್ತಿರಲಿಲ್ಲ. ಇತ್ತೀಚಿನ ಹೊಸ ಕಾನೂನಿನ ಪರಿಣಾಮ ಯಾವುದೇ ಮರಳುಗಾರಿಕೆ ನಡೆಯದೇ ನದಿಯಲ್ಲಿ ಹೂಳು ತುಂಬಿ ನದಿ ಪಾತ್ರ ತುಂಬಿರುತ್ತದೆ. ಇದರಿಂದ ಮಳೆಗಾಲದಲ್ಲಿ ಕೃತಕ ನೆರೆ ಬಂದು ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸುತ್ತಿದೆ.

ಪಂಚಗಂಗಾವಳಿ ಪ್ರವಾಸೋಧ್ಯಮ ವಿಚಾರ ಸರಕಾರದ ಕಡತಗಳಲ್ಲಿಯೇ ಗೆದ್ದಲು ತಿನ್ನುತ್ತಿದೆ. ಇಂತಹ ಅದ್ಭುತ ಪರಿಸರ ಪ್ರವಾಸೋದ್ಯಮಕ್ಕೂ ಬಳಸದಿರುವ ಪ್ರವಾಸೋದ್ಯಮ ಇಲಾಖೆಯ ಆಸಡ್ಡೆ ಎದ್ದು ಕಾಣುತ್ತದೆ. ಸ್ಥಳೀಯ ಒತ್ತಡ ಇಲ್ಲದಿರುವುದರಿಂದ ಒಂದು ದಶಕದ ಹಿಂದೆ ಈ ಬಗ್ಗೆ ಸಮೀಕ್ಷೆ ನಡೆಸಿದ ಲೋಕೋಪಯೋಗಿ ಹಾಗೂ ಪ್ರವಾಸೋದ್ಯಮ ಇಲಾಖೆ ಆನಂತರ ಸುಮ್ಮನಾದವು. ಸರಕಾರವು ಪ್ರವಾಸೋದ್ಯಮ ಅಭಿವೃದ್ಧಿಯ ಮಂತ್ರ ಪಠಿಸುತ್ತಿವೆಯೇ ಹೊರತು ಕಾರ್ಯಾನುಷ್ಠಾನಕ್ಕೆ ಮುಂದಾಗುತ್ತಿಲ್ಲ.

ಇತ್ತೀಚೆಗೆ ಕೋಡಿಯಲ್ಲಿ ಉಪ್ಪು ನೀರು ಕೃಷಿಭೂಮಿ ನುಗ್ಗುವಲ್ಲಿ ಪಂಚಗಂಗಾವಳಿಯಲ್ಲಿ ಹೂಳು ತುಂಬಿರುವುದು ಕೂಡಾ ಕಾರಣವಾಗಿದೆ. ನದಿಯನ್ನು ಅವಲಂಭಿತರಾದ ಮೀನುಗಾರರ ಜೀವನ ಬಹಳ ಸಂಕಷ್ಟಕ್ಕೀಡಾಗಿದೆ. ಆದ್ದರಿಂದ ಸ್ಥಳೀಯ ಮೀನುಗಾರರ ಹಿತದೃಷ್ಟಿಯಿಂದ ಪಂಚಗಂಗಾವಳಿ ನದಿಯ ಹೂಳನ್ನು ತೆಗೆದು ಮೀನುಗಾರಿಕೆ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡಬೇಕಾಗಿ ಮಾನ್ಯ ಮೀನುಗಾರಿಕೆ, ಬಂದರು ಹಾಗು ಒಳನಾಡು ಜಲಸಾರಿಗೆ ಮಂತ್ರಿಗಳನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:-**

- ಕರಾವಳಿ ಭಾಗದಲ್ಲಿ ಪಶ್ಚಿಮ ಘಟ್ಟದಿಂದ ಅನೇಕ ನದಿಗಳು ಕಡಲನ್ನು ಸೇರುತ್ತಿವೆ.
- ಪಂಚಗಂಗಾವಳಿ ನದಿಯು ಕೂಡ (ವರಾಹಿ, ಸೌಪರ್ಣಿಕಾ, ಚಕ್ರ, ಕುಬ್ಜ, ಕಡಕ) 05 ಉಪನದಿಗಳು ಕುಂದಾಪುರ ಬಳಿಯ ಗಂಗೊಳ್ಳಿ ಭಾಗದಲ್ಲಿ ಸಮುದ್ರವನ್ನು ಸೇರುತ್ತದೆ.

- ಗಂಗೊಳ್ಳಿ ಸಮೀಪದ ಅಳಿವೆ ಬಾಗಿಲಿನಲ್ಲಿ (ನದಿ ಸಮುದ್ರ ಸೇರುವ ಸ್ಥಳ) ಪ್ರಸ್ತುತ ಗಂಗೊಳ್ಳಿಯಲ್ಲಿ 01 ಸುಸಜ್ಜಿತ ಮೀನುಗಾರಿಕೆ ಬಂದರಿನಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ.
- ಗಂಗೊಳ್ಳಿ ಮೀನುಗಾರಿಕೆ ಬಂದರು 63,718 ಮೆಟ್ರಿಕ್ ಟನ್‌ನಷ್ಟು ಸಾಮರ್ಥ್ಯದ ಮೀನುಗಾರಿಕೆ ಹಿಡುವಳಿಯನ್ನು ಮಾಡಲಾಗುತ್ತಿದೆ.
- 2891 ಮೋಟಾರೀಕೃತ ಬೋಟುಗಳು ಮತ್ತು 295 ಯಾಂತ್ರೀಕೃತ ದೋಣಿಗಳು ಬಂದರಿನ ವ್ಯಾಪ್ತಿಯಲ್ಲಿ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿವೆ.
- ಕರಾವಳಿ ಭಾಗದ ಅನೇಕ ಭಾಗಗಳಲ್ಲಿ ನದಿಯ ಹಿನ್ನೀರು ಪ್ರದೇಶಗಳಲ್ಲಿ ಹೂಳಿನ ಸಮಸ್ಯೆ ಇರುವುದನ್ನು ಸರ್ಕಾರವು ಮನಗಂಡಿದೆ.
- ಹಿಂದಿನ ವರ್ಷ ಮಲ್ಪೆ, ಗಂಗೊಳ್ಳಿ, ಮಂಗಳೂರು, ಭಟ್ಕಳ, ಕಾರವಾರ ಮೀನುಗಾರಿಕಾ ಬಂದರುಗಳಲ್ಲಿ ರೂ.16.88 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.
- ಪಂಚಗಂಗಾವಳಿಯು ಕೂಡ ಹಿನ್ನೀರಿನ ಭಾಗದಲ್ಲಿ ಹೂಳಿನ ಸಮಸ್ಯೆಯಿರುವುದು ಮನಗಂಡಿರುತ್ತದೆ. ಅದರಲ್ಲಿ ರೂ. 4.60 ಕೋಟಿ ವೆಚ್ಚವಾಗಿರುತ್ತದೆ.
- ಮುಂದಿನ ದಿನಗಳಲ್ಲಿ ಹೂಳನ್ನು ತೆಗೆಯನ್ನು ಅನುದಾನದ ಲಭ್ಯತೆಯ ಆಧಾರದ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಸಂಖ್ಯೆ: ಪಸಂಮೀ ಇ-70 ಮೀಇಯೋ 2025